ವಿದ್ಯಾರಣ್ಯ ಕನ್ನಡ ಕೂಟ
ಇಲಿನಾಯ್, ಯು. ಎಸ್. ಎ.
VIDYARANYA KANNADA KUTA
ILLINOIS, USA

೨೦೦೭
ಹೊಸ ಚಿಗುರು
ಹಳೆ ಬೇರು
ಕೂಡಿರಲು ಮರ ಸೊಬಗು

# ವಿದ್ಯಾರಣ್ಯ ಕನ್ನಡ ಕೂಟ, ಇಲಿನಾಯ್, ಯು.ಎಸ್.ಎ.

Bulletin #6 (ಕನ್ನಡ) | VKK News and Updates | March 2, 2007

## ಯುಗಾದಿಯ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಕರೆ

ಮಾನ್ಯ ಸದಸ್ಯರೇ,

ನಿಮ್ಮಲ್ಲಿ ಹಲವಾರು ಮಂದಿ ಈಗಾಗಲೇ ಮುಂಬರುವ ಯುಗಾದಿ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ತಯಾರಿಕೆ ನಡೆಸಿರಬಹುದು. ಈ ಮುನ್ನ ತಿಳಿಸಿರುವಂತೆ ಈ ಬಾರಿಯ ಕಾರ್ಯಕಾರಿ ಸಮಿತಿಯು ವರ್ಷಪೂರ ಉತ್ತಮ, ಮನರಂಜಕ ಹಾಗೂ ವೈವಿಧ್ಯಮಯ ಕಾರ್ಯಕ್ರಮಗಳನ್ನು ನೀಡುವ ಧ್ಯೇಯ ಹೊಂದಿದೆ. ಈ ಬಾರಿ ಯುಗಾದಿ ಹಬ್ಬದ ಆಚರಣೆಯ ಸಂಧರ್ಭದಲ್ಲಿ 'ಬಣ್ಣಗಳು' ಎಂಬ ವಿಷಯಾಧಾರಿತ ಕಾರ್ಯಕ್ರಮಗಳ್ನು ಪ್ರಸ್ತುತ ಪಡಿಸುವ ಯೋಜನೆ ನಮ್ಮದು. ಇದರಲ್ಲಿ ಭಾಗವಹಿಸಲು ನಿಮಗೆ ನಮ್ಮ ವಿನಂತಿ. ಕಾರ್ಯಕ್ರಮಗಳ ಬಗ್ಗೆ ಹೆಚ್ಚಿನ ವಿವರ ಮತ್ತು ಮಾಹಿತಿಗಳನ್ನು ಕೆಲವು ಸದಸ್ಯರು ಕೇಳಿದ್ದಾರೆ. ಅವುಗಳನ್ನು ಈ ಮೂಲಕ ನೀಡಲು ಇಚ್ಛಿಸುತ್ತೇವೆ.

## ಕಾರ್ಯಕ್ರಮಗಳ ವಿವರ

### ಮಕ್ಕಳ ಕಾರ್ಯಕ್ರಮಗಳು

ಹತ್ತು ವರ್ಷ ಮತ್ತು ಕೆಳಗಿನ ವಯಸ್ಸಿನ ಮಕ್ಕಳ ಕಾರ್ಯಕ್ರಮಕ್ಕೆಂದು ಸುಮಾರು ಒಂದು ಘಂಟೆ ಕಾಲ ಸಮಯವನ್ನು ಕಾಯ್ದಿಡಿಸಲಾಗಿದೆ. ಈ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಎಲ್ಲರು ತಮ್ಮ ಪ್ರದರ್ಶನವನ್ನು 'ಬಣ್ಣಗಳು' ಎಂಬ ವಿಷಯವನ್ನು ಅಧಾರವಾಗಿಟ್ಟುಕೊಂಡು ಮಾಡತಕ್ಕದ್ದು. ಇದನ್ನು ಹಲವಾರು ರೀತಿಯಲ್ಲಿ ಮಾಡಬಹುದು.

ಉದಾಹರಣೆ: ಹಾಡು, ನೃತ್ಯ, ವೇಷಭೂಷಣ ಇತ್ಯಾದಿ.

### 'ಪ್ರತಿಭಾನ್ವೇಷಣೆ'

ಟಾಲೆಂಟ್ ಹಂಟ್ (ಪ್ರತಿಭಾನ್ವೇಷಣೆ)ಯಲ್ಲಿ ಹತ್ತು ವರ್ಷ ಮೇಲ್ಪಟ್ಟ ಮಕ್ಕಳು ಮತ್ತು ಕೂಟದ ಸದಸ್ಯರು ಭಾಗವಹಿಸಬಹುದು.

**ಈ ಮೂರು ವರ್ಗಗಳಲ್ಲಿ ತಂಡಗಳು ಭಾಗವಹಿಸಬಹುದು.**

- ೧೦ ರಿಂದ ೧೪ ವರ್ಷದ ಮಕ್ಕಳು
- ೧೫ ರಿಂದ ೨೧ ವರ್ಷದ ಕಿರಿಯರು
- ಕೂಟದ ಸದಸ್ಯರು (೨೨ ವರ್ಷಕ್ಕಿಂತ ಹೆಚ್ಚಿನವರು)

**ನಿಯಮಗಳು**

- ಕನ್ನಡ ಹಾಡುಗಳು ಮಾತ್ರ
- ಪ್ರತಿ ತಂಡದಲ್ಲಿ ಕನಿಷ್ಠ ೪ ಹಾಗು ಗರಿಷ್ಠ ೧೨ ಮಂದಿ ಕಲಾವಿದರು ಇರತಕ್ಕದ್ದು.
- ಪ್ರತಿ ಪ್ರದರ್ಶನಕ್ಕೆ ೫ ನಿಮಿಷ ಕಾಲವಕಾಶ

ಈ ಕಾರ್ಯಕ್ರಮದಲ್ಲಿ ಭಾಗವಹಿಸಲು ಪ್ರವೇಶ ದರ (ಪ್ರತಿ ತಂಡಕ್ಕೆ) ಡಾಲರ್ ೨೦.೦೦ ನಿಗದಿಗೊಳ್ಳಿಸಲಾಗಿದೆ.

### ಹರಟೆ

ಹರಟೆ ಕಾರ್ಯ್ಕ್ರಮವನ್ನು ಮೊದಲ ಬಾರಿಗೆ ಕನ್ನಡ ಕೂಟದಲ್ಲಿ ಈ ಬಾರಿ ಏರ್ಪಡಿಸಿದ್ದೇವೆ. ವಿನೋದಮಯ ಮತ್ತು ಸ್ವಾರಸ್ಯಕರ ವಾದ-ವಿವಾದ ಈ ಹರಟೆಯ ವೈಶಿಷ್ಟ್ಯ. ಹರಟೆಯ ವಿಷಯವನ್ನು ಸದಸ್ಯರಿಗೆ ಮುಂಚೆಯೆ ತಿಳಿಸಲಾಗುವುದು. ಹೆಚ್ಚು ಸದಸ್ಯರು ಭಾಗವಹಿಸಲು ಇಚ್ಛಿಸಿದಲ್ಲಿ ಚೀಟಿ ತೆಗೆದು (ಲಾಟರಿ ಮೂಲಕ) ಆರಿಸಲಾಗುವುದು.

### ಗೀತ ಪಠಣೆ

ಯುಗಾದಿ ಸಂಧರ್ಭದಲ್ಲಿ ಗೀತ ಪಠಣೆಯನ್ನು ಏರ್ಪಡಿಸುವ ಯೋಜನೆಯಲ್ಲಿದ್ದೇವೆ. ಪಠಣೆ ಮಾಡುವ ಶ್ಲೋಕಗಳನ್ನು (ಶ್ಲೋಕ ೧೬ ರಿಂದ ೩೦ ರವರೆಗೂ) ಅಧ್ಯಾಯ ೬ ರಿಂದ ಆಯ್ದುಕೊಳ್ಳಲಾಗುವುದು. ಕೂಟದ ಸದಸ್ಯರ ಮಕ್ಕಳು ಇದರಲ್ಲಿ ಭಾಗವಹಿಸಬಹುದು.

**ಆಯ್ದಿರುವ ಪಠಿಸುವ ಶೈಲಿ:** 'ಚಿನ್ಮಯ ಮಿಶನ್'ನಲ್ಲಿ ಹೇಳಿಕೊಡುವ "ಗೀತಾ ಪಠಣ" ಶೈಲಿ.

ನಿಮಗೆ ಈ ಕಾರ್ಯಕ್ರಮಗಳ ಬಗ್ಗೆ ಇನ್ನೂ ಹೆಚ್ಚಿನ ವಿವರ ಬೇಕಿದ್ದಲ್ಲಿ ನಮ್ಮನ್ನು ದೂರವಾಣಿ ಅಥವಾ ಈ-ಮೇಲ್ ಮೂಲಕ ಸಂಪರ್ಕಿಸಿ. 'ಬಣ್ಣಗಳು' ವಿಷಯಾಧಾರಿತ ಕಾರ್ಯಕ್ರಮಗಳನ್ನು ರೂಪಿಸಿ ಪ್ರದರ್ಶಿಸಲು ಸಾಧ್ಯವಾಗದಿದ್ದಲ್ಲಿ, ಸದಸ್ಯರು ಬೇಸರಗೊಳ್ಳಬೇಕಿಲ್ಲ. ಬೇರೆ ರೀತಿಯ ಕಾರ್ಯಕ್ರಮದಲ್ಲಿ ಭಾಗವಹಿಸಿ ಪ್ರದರ್ಶಿಸುವ ಉದ್ದೇಶವಿದ್ದಲ್ಲಿ, ಈ ಕೂಡಲೆ ನಮ್ಮನ್ನು ಸಂಪರ್ಕಿಸಿ. ನಾವು ಎಲ್ಲಾ ಕಾರ್ಯಕ್ರಮಗಳಿಗೆ ಸಮಯವನ್ನು ಗೊತ್ತುಮಾಡುವ ಹವಣಿಕೆಯಲ್ಲಿದ್ದೇವೆ.

**ದಯವಿಟ್ಟು ಲಕ್ಷಿಸಿ:**

೧. ಯುಗಾದಿ ಕಾರ್ಯಕ್ರಮದಲ್ಲಿ ಭಾಗವಹಿಸಲು ಮೊದಲು ತಿಳಿಸಿದವರಿಗೆ ಅವಕಾಶ ಕೊಡಲಾಗುವುದು. ಅವಕಾಶ ಸಿಗದಿದ್ದವರಿಗೆ ಮುಂದಿನ ಕೂಟದ ನಿಗದಿತ ಕಾರ್ಯಕ್ರಮದಲ್ಲಿ ಮೊದಲ ಅವಕಾಶ ಕೊಡಲಾಗುವುದು.
೨. 'ಬಣ್ಣಗಳು' ವಿಷಯಾಧಾರಿತವಾದ ಕಾರ್ಯಕ್ರಮಗಳನ್ನು ಪ್ರದರ್ಶಿಸುವುದು ನಮ್ಮ ಉದ್ದೇಶ. ಆದರೆ ಸಮಯವಕಾಶವಿದ್ದಲ್ಲಿ 'ಬಣ್ಣಗಳು' ವಿಷಯಾಧಾರಿತವಲ್ಲದ ಕಾರ್ಯಕ್ರಮಗಳಿಗೆ ಪ್ರದರ್ಶಿಸಲು ಅವಕಾಶ ಮಾಡಿಕೊಳ್ಳಲಾಗುವುದು.
೩. ತಂಡಗಳಿಗೆ ಮೊದಲ ಪ್ರಾಮುಖ್ಯತೆ ಕೊಡಲಾಗುವುದು.
೪. ಭಾಗವವಹಿಸುವ ತಂಡಗಳು ಹಾಗೂ ಸದಸ್ಯರು ನೋಂದಣಿ ಪತ್ರದಲ್ಲಿ ಕಾರ್ಯಕ್ರಮ ಮತ್ತಿತರ ವಿವರಗಳನ್ನು ನೀಡಬೇಕು. ಭಾಗವಹಿಸುವರನ್ನು ಮತ್ತು ಸಂಯೋಜಕರನ್ನು ನಾವು ಸಂಪರ್ಕಿಸಲು ಕೂಡ ಇದು ನೆರವಾಗುವುದು.

ಮೇಲೆ ನಮೂದಿಸಿರುವ ಕಾರ್ಯಕ್ರಮಗಳಲ್ಲದೆ ಬೇರೆ ಕಾರ್ಯಕ್ರಮಗಳನ್ನು ಏರ್ಪಡಿಸುವ ಹವಣಿಕೆಯಲ್ಲಿದ್ದೇವೆ. ಕಾರ್ಯಕ್ರಮಗಳೆಲ್ಲವೂ ಖಾತ್ರಿಯಾದ ನಂತರ ಪೂರ್ಣ ವಿವರಗಳನ್ನು ಸದಸ್ಯರೆಲ್ಲರಿಗೂ ಈ-ಮೇಲ್ ಮೂಲಕ ತಿಳಿಸುತ್ತೇವೆ. ಕೂಟದ ಕಾರ್ಯಕ್ರಮಗಳೆಲ್ಲವೂ ಯಶಸ್ವಿಯಾಗಿ ನಡೆಯಲು ನಿಮ್ಮೆಲ್ಲರ ಸಹಕಾರ ಮತ್ತು ಬೆಂಬಲ ಅತ್ಯಗತ್ಯ.

ಮತ್ತೊಮ್ಮೆ, ನಿಮಗೆ ಈ ಕಾರ್ಯಕ್ರಮಗಳ ಬಗ್ಗೆ ಇನ್ನೂ ಹೆಚ್ಚಿನ ವಿವರ ಬೇಕಿದ್ದಲ್ಲಿ ನಮ್ಮನ್ನು ಸಂಪರ್ಕಿಸಿಲು ತಡಮಾಡಬೇಡಿ.

**ಸಾಂಸ್ಕೃತಿಕ ಸಮಿತಿ**

**ವಿದ್ಯಾರಣ್ಯ ಕನ್ನಡ ಕೂಟ, ಇಲಿನಾಯ್, ಯು.ಎಸ್.ಎ.**

For Phone Numbers and Email Ids of VKK Executive/Cultural Committee Members, please visit http://www.vidyaranyakannadakuta.org